# ಸದ್ದಿಲ್ಲದೇ ಸ್ತ್ರೀ ಶಿಕ್ಷಣಕ್ಕೆ ನಾಂದಿ ಹಾಡಿದ ಹರಿಕಾರ

ವೈಶಿಷ್ಟ್ಯ

ಸುದರ್ಶನ ಜೆ.
editoped@vishwavani.news

ಸರಿ ಸುಮಾರು ನೂರಾಹನ್ನೊಂದು ವರ್ಷಗಳ ಕಾಲ ದೇಶ ಸೇವೆಯೇ ಈಶ ಸೇವೆ ಎಂದೆನ್ನುತ್ತಾ, ಜನತೆಯಲ್ಲಿಯೇ ಜನಾರ್ದನನನ್ನು ಕಂಡು ನಮ್ಮನ್ನಗಲಿದ ಯುಗಪುರುಷ , ನಡೆದಾಡುವ ದೇವರೆಂದೇ ಜನಮಾನಸಗಳಲ್ಲಿನೆಲೆಯಾಗಿದ್ದ ಶ್ರೀ ಶಿವಕುಮಾರಸ್ವಾಮಿಗಳು ನಮ್ಮನ್ನು ತೊರೆದು ಹೋದದ್ದು ದುಃಖಕರವಾದ ಸಂಗತಿಯೇ ಸರಿ. ಕಾಲನ ಕರೆಗೆ ಓಗೊಡದವರಾರು?

ಸ್ವಾಮೀಜಿಗಳ ಬಗ್ಗೆ, ಅವರು ಹಗಲಿರುಳು ದುಡಿದು ಕಾಯಾ ವಾಚಾ ಮನಸಾ ದೀನರ ಕರೆಗೆ ಓಗೊಟ್ಟದ್ದು, ಏನೂ ಇದ್ದಿಲ್ಲದ ಒಂದು ಬಿಡಿ ಮಠವನ್ನು ಬೃಹತ್ ಸಂಸ್ಥೆಯನ್ನಾಗಿ ಬೆಳೆಸಿದ್ದು, ಆ ಮೂಲಕವಾಗಿ ಲಕ್ಷಾಂತರ ಜೀವಗಳ ಅಭಿವೃದ್ಧಿಗೆ ಕಾರಣರಾದದ್ದು, ಜಾತ್ಯತೀತರೆಂದು ಕೊಚ್ಚಿಕೊಳ್ಳುವ ಸರಕಾರಗಳ ಅ ನೀತಿಯ ಕಾಕದೃಷ್ಟಿಗೆ ಬಿದ್ದು ಕಷ್ಟ ಅನುಭವಿಸಿದರೂ ಒಂದೇ ಒಂದು ಮಾತನಾಡದೆ ಮಠದ ಮಕ್ಕಳಿಗೆ ಅನ್ನಪೋಷಣೆ ವಿದ್ಯಾದಾನಗಳನ್ನು ಅವಿರತವಾಗಿ ಮುಂದುವರಿಸಿದ್ದು ಎಲ್ಲವನ್ನು ಕೇಳಿ, ಓದಿ ತಿಳಿದಿದ್ದೇವೆ. ಇವೆಲ್ಲದರ ನಡುವೆ ತುಮಕೂರಿನ ಆಸುಪಾಸಿನಲ್ಲಿ ನಾನಾ ಕಾರಣಗಳಿಗೆ ವಿದ್ಯಾಭ್ಯಾಸಕ್ಕೆ ಅವಕಾಶವಿಲ್ಲದ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಟ್ಟ ಸಮಾನತೆಯ ಹರಿಕಾರ ಅವರಾಗಿದ್ದರು ಎಂಬುದು ಬಹುತೇಕರಿಗೆ ತಿಳಿದಿಲ್ಲದ ವಿಚಾರ.

ಸಿದ್ಧಗಂಗಾ ಮಠದ ಶಾಲೆಯ ಮೊತ್ತ ಮೊದಲ ವಿದ್ಯಾರ್ಥಿನಿಯಾದ ನನ್ನ ತಾಯಿಯ ಅನುಭವದ ಪರಿಚಯ ಈ ಲೇಖನದ ಉದ್ದೇಶ. ಇದನ್ನು ಹೇಳುವಾಗ, ಬರೆಯುವಾಗ ಭಕ್ತಿ, ಕೃತಜ್ಞತೆಗಳು ಎದೆ ತುಂಬಿ ನಿಂತಿವೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲವಷ್ಟೇ.

1954ನೇ ಇಸವಿ, ತಂದೆ ಕಾಲವಾದ ನಂತರ ಬೇರೆ ಆಧಾರವೇನೂ ಇಲ್ಲದೆ ಆಂಧ್ರಪ್ರದೇಶದ ಕನ್ನಡ-ತೆಲುಗು ಸಂಸ್ಕೃತಿ, ಭಾಷೆಗಳ ಬೀಡಾದ ಕೌತಾಳಂ ಎಂಬ ಕುಗ್ರಾಮದಿಂದ ಹೋರಾಡಬೇಕಾದ ಅನಿವಾರ್ಯ ನನ್ನ ತಾಯಿಗೆ ಧುತ್ತೆಂದು ಎದುರಾಯಿತು. ಅಣ್ಣನಾದರೋ ಯಾವುದೋ ದೂರದ ಊರಿನಲ್ಲಿ ಚಿಕ್ಕದೊಂದು ಕೆಲಸಕ್ಕಿದ್ದ. ಯಾವ ಸೌಕರ್ಯಗಳಿಲ್ಲದ ಊರಿನಲ್ಲಿ ಒಬ್ಬಂಟಿಯಾಗಿದ್ದ ಆತನ ಜತೆ ಇರುವ ಸಾಧ್ಯತೆಗಳಿಲ್ಲದ ಕಾರಣ ಈಗಾಗಲೇ ಮದುವೆಯಾಗಿದ್ದ ತನ್ನ ಅಕ್ಕನ ಮನೆಯಲ್ಲಿ ಇರಬೇಕಾಯಿತು.

ತುಮಕೂರು ಜಿಲ್ಲೆಯ ಕುಗ್ರಾಮವಾದ ಮೈದಾಳ ಎಂಬಲ್ಲಿ ಬಂದು ಸೇರಿದ ಆಕೆ, ಮನೆತುಂಬ ಮಕ್ಕಳಿದ್ದ ತನ್ನ ಅಕ್ಕನಿಗೆ ಸಹಾಯಕಳಾಗಿ ಸ್ವಲ್ಪ ದಿನ ನಿಂತಳು. ಅಕ್ಕನ ಮೊದಲ ಮಗ ನನ್ನ ತಾಯಿಗಿಂತ ಕೇವಲ ಮೂರು ವರ್ಷ ಚಿಕ್ಕವ. ಹಾಗಾಗಿ ನನ್ನ ತಾಯಿಯು ತನ್ನ ಅಕ್ಕನ ಮಕ್ಕಳಲ್ಲಿ ಒಬ್ಬಳಾಗಿಯೇ ಉಳಿದಳು. ಆಗ ತುಮಕೂರು ಜಿಲ್ಲೆಗೆ ಖ್ಯಾತವಾದ ವಿಶಾಲವಾದ ವರ್ಷ ಪೂರ್ತಿ ಮೈದುಂಬಿ ನಳನಳಿಸಿ ತುಮಕೂರು ನಗರಕ್ಕೆ ನೀರು ಪೂರೈಸುತ್ತಿದ್ದ ಮೈದಾಳದ ಕೆರೆಯ ನೀರಿನ ನಿರ್ವಹಣೆ ಭಾವನ ಕೆಲಸ. (ನನಗೆ ದೊಡ್ಡಪ್ಪನಾಗಬೇಕು.) ಸಣ್ಣ ಕೆಲಸ, ಕಡಿಮೆ ಸಂಬಳ, ಮನೆತುಂಬ ಜನ, ಬಡತನ ಎಂದು ಬೇರೆ ಹೇಳಬೇಕಿಲ್ಲವಷ್ಟೆ. ಇಷ್ಟಾಗಿಯೂ ಪ್ರೀತಿ ವಿಶ್ವಾಸಗಳಿಗೆ ಕಡಿಮೆಯಿರದಂತೆ, ಜವಾಬ್ದಾರಿಗಳಿಗೆ ಹೆಗಲು ಕೊಡುವ ಸಂಸ್ಕೃತಿ, ಮನಸ್ಥಿತಿ ಅಂದಿನ ದಿನಗಳಲ್ಲಿ ಶ್ರೀಮಂತವಾಗಿಯೇ ಇತ್ತು.

ಯಾವುದೇ ಶಾಲೆಗೆ ಆಗ ತುಮಕೂರಿಗೆ ಹೋಗಬೇಕಿತ್ತು. ಅದು 14-15 ಕಿಲೋಮೀಟರುಗಳು. ಬಸ್ಸು ಇತ್ಯಾದಿ ವ್ಯವಸ್ಥೆಯಿರಲಿಲ್ಲ. ಸೈಕಲ್ಲಿಗೆ ದುಡ್ಡಿಲ್ಲ. ಅಷ್ಟಕ್ಕೂ ಆ ದಿನಗಳಲ್ಲಿ ಹೆಣ್ಣು ಮಕ್ಕಳಿನ್ನೂ ಸೈಕಲ್ ತುಳಿಯುವ ಸಾಹಸ ಮಾಡುತ್ತಿರಲೂ ಇಲ್ಲ. ಅಕ್ಕನ ದೊಡ್ಡ ಮಗ ಆ ಹಳ್ಳಿಯ ನಾಲ್ಕನೇ ಕ್ಲಾಸು ಪಾಸು ಮಾಡಿ ಐದನೇ ತರಗತಿಗೆ ಸಿದ್ಧಗಂಗೆಯ ಶಾಲೆಗೇ ಹೋಗಲು ತನ್ನ ಸ್ನೇಹಿತರೊಂದಿಗೆ ತಯಾರಾದ. ಏಳನೇ ತರಗತಿಗೆ ತಯಾರಾದ ಹೆಣ್ಣುಮಗುವೊಂದು ಮನೆಯಲ್ಲಿಯೇ ಇದೆ. ಓದುವ ಆಸೆಯೂ ಇದೆ. ಅಕ್ಕ ಭಾವನಿಗೆ ಯೋಚನೆ, ಏನ ಹೇಗೆ ಆಕೆಯನ್ನುಶಾಲೆಗೆ ಕಳಿಸುವುದು ಎಂದು. ಊರಿನ ನಾಲ್ಕೈದು ಮಕ್ಕಳು ಹೇಗೂ ಸಿದ್ಧಗಂಗೆ ಶಾಲೆಗೇ ಹೋಗಿ ಬರುವಾಗ ಅವರ ಜತೆಗೆ ನನ್ನ ತಾಯಿಯನ್ನೂ ಕಳಿಸಿದರೆ ಹೇಗೆ ಎಂಬ ಸಲಹೆ ನನ್ನ ದೊಡ್ಡಮ್ಮನಿಂದ. ಆದರೆ ಮಠದಲ್ಲಿ ಆಗ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅವಕಾಶವಿರಲಿಲ್ಲ. ನನ್ನ ದೊಡ್ಡಪ್ಪ ಧೈರ್ಯ ಮಾಡಿ ನನ್ನ ತಾಯಿಯನ್ನು ಕರೆದುಕೊಂಡು ದೇವರ ಮೇಲೆ ಭಾರ ಹಾಕಿ ಒಂದು ಅಳುಕಿನಿಂದಲೇ ಹೊರಟುಬಿಟ್ಟರು.

ಸಿದ್ಧಗಂಗೆಯಲ್ಲಿ ಒಂದು ಕಲ್ಯಾಣಿಯಿದೆ. ಪ್ರತಿ ವರ್ಷವೂ ಜಾತ್ರಾ ಸಮಯದಲ್ಲಿ ಮೈದಾಳದ ಕೆರೆಯ ನೀರನ್ನು ಆ ಕಲ್ಯಾಣಿಗೆ ಬಿಡುವ ವ್ಯವಸ್ಥೆಯಿದೆ. ನನ್ನ ದೊಡ್ಡಪ್ಪ ಆ ಕೆಲಸವನ್ನು ಅಲ್ಲಿ ಕೆಲವು ವರ್ಷಗಳಿಂದ ಮಾಡುತ್ತಿದ್ದು, ಸ್ವಾಮಿಗಳು ಪ್ರತಿ ವರ್ಷವೂ ಜಾತ್ರಾ ಸಮಾರೋಪ ಸಮಾರಂಭದಲ್ಲಿ ಒಂದು ಶಾಲು ಹೊಂದಿಸಿ ಸನ್ಮಾನ ಮಾಡುತಿದ್ದ ಪರಿಚಯವಷ್ಟೇ ನನ್ನ ದೊಡ್ಡಪ್ಪನಿಗಿದ್ದದ್ದು. ಸ್ವಾಮಿಗಳ ಭೇಟಿಗೆ ಅವಕಾಶವನ್ನು ಕೇಳಿ ಅವರನ್ನು ಕಂಡದ್ದಾಯಿತು. ಹೆಣ್ಣು ಮಗಳ ಪರಿಸ್ಥಿತಿಯನ್ನು ವಿವರಿಸಿದ್ದಾಯಿತು. ಸುಮಾರು 500 ಜನರಿದ್ದ ಮಠದ ವಾತಾವರಣದಲ್ಲಿ ಒಬ್ಬ ಒಂಟಿ ಹೆಣ್ಣುಮಗಳು ನಿಭಾವಣೆ ಕಷ್ಟ. ನಿರಾಕರಿಸಿದರೆ ಒಂದು ಹೆಣ್ಣು ಮಗುವಿನ ವಿಕಾಸಕ್ಕೆ ಕಲ್ಲು ಹಾಕಿದಂತೆ, ಒಪ್ಪಿಕೊಂಡರೆ ಗುರುತರ ಜವಾಬ್ದಾರಿ. ಮಠದ ಗೌರವಕ್ಕೆ ಕುಂದು ಬರುವ ಘಟನೆಯೇನಾದರೂ ನಡೆದರೆ ಹೇಗೆ ಎಂಬ ಚಿಂತೆ. ಆ ತೊಳಲಾಟವನ್ನು ನನ್ನ ತಾಯಿ ಇಂದಿಗೂ ನೆನಪಿಸಿಕೊಳ್ಳುತ್ತಾರೆ.

ಮನೆ, ಊರು, ಮೈದಾಳದಿಂದ ಬರುವ ಹುಡುಗರು, ಅವರ ಮನೆತನ, ನಡೆವಳಿಕೆ, ಕ್ರಮಿಸುವ ದಾರಿ, ಹೊರಡುವ, ಮನೆಗೆ ಮರಳುವ ಸಮಯ, ಇತ್ಯಾದಿಗಳನ್ನು ವಿವರವಾಗಿ ವಿಚಾರಿಸಿ, ಪ್ರಶ್ನಿಸಿ ವಿಷಯ ಸಂಗ್ರಹಣೆ ಮಾಡಿದ ಸ್ವಾಮಿಗಳು ಯೋಚಿಸಿ ತಿಳಿಸುವುದಾಗಿ ಹೇಳಿ ಕಳಿಸಿದರು. ಇತ್ತ ಊರಿಂದ ಬರುವ ಒಬ್ಬೊಬ್ಬ ಹುಡುಗನನ್ನೂ ಅವನ ಮನೋಭಾವವನ್ನೂ ತಾವೇ ಖುದ್ದಾಗಿ ಅವರಿಗೆ ತಿಳಿಯದಂತೆ ಪರೀಕ್ಷಿಸಿದರು. ಆನಂತರದಲ್ಲಿ ಒಬ್ಬೊಬ್ಬರನ್ನೂ ಪ್ರತ್ಯೇಕವಾಗಿ ಕರೆದು ಅವರ ಜವಾಬ್ದಾರಿಗಳನ್ನು ತಿಳಿಸಿ ಹೇಳಿದರು. ಆಮೇಲೆ ನನ್ನ ದೊಡ್ಡಪ್ಪನಿಗೆ ಕರೆ ಹೋಯಿತು, ಅವರ ಮಗನ ಮೂಲಕ ಆತಂಕದಿಂದಲೇ ಬಂದ ಕೃಷ್ಣಪ್ಪನವರನ್ನು ಕೂಡಿಸಿ ಸ್ವಾಮೀಜಿ ತಾವು ನಾಗರತ್ನಳನ್ನು ಶಾಲೆಗೆ ತೆಗೆದುಕೊಳ್ಳಲು ಒಪ್ಪಿರುವುದಾಗಿಯೂ ಒಳ್ಳೆಯ ದಿನ ನೋಡಿಕೊಂಡು ಆಕೆಯನ್ನು ಕರೆತಂದು ಶಾಲೆಗೆ ದಾಖಲು ಮಾಡಬೇಕಾಗಿಯೂ ತಿಳಿಸಿದರು. ಎಲ್ಲರ ಆನಂದಕ್ಕೆ ಪಾರವಿಲ್ಲದಂತಾಯಿತು.

ಸ್ವಾಮೀಜಿಯವರ ದೊಡ್ಡತನ ಅಷ್ಟಕ್ಕೇ ನಿಲ್ಲುವುದಿಲ್ಲ. ಅವರ ದೂರದೃಷ್ಟಿ, ಕಾಳಜಿ ಜವಾಬ್ದಾರಿಗಳು ಇಂದಿಗೂ ಎಲ್ಲರಿಗೂ ಮಾರ್ಗದರ್ಶನಕಾರಿಯಾಗುವಂತಹವು. ಶಾಲೆಗೆ ಒಬ್ಬ ಏಕೈಕ ವಿದ್ಯಾರ್ಥಿನಿ ಸೇರ್ಪಡೆಯಾದ ಮೇಲೆ ಮಠದ ಶಾಲೆಯ ಶಿಕ್ಷಕರಿಗೂ ಕರೆ ಹೋಯಿತು. ವಿಷಯವನ್ನು ವಿವರಿಸಿ ಆಕೆಯ ಘನತೆ, ಗೌರವ ಸುರಕ್ಷೆ , ಕಲಿಕೆಗಳಿಗೆ ಮಾರ್ಗಸೂಚಿಯನ್ನು ಅಳವಡಿಸಲಾಯಿತು. ಅದರಂತೆ ಮೈದಾಳ ಎಂಬ ಹಳ್ಳಿಯಿಂದ ಸುರಕ್ಷಿತವಾಗಿ ಕರೆತರುವ ಜವಾಬ್ದಾರಿ ಅಕ್ಕನ ಮಗ ಹಾಗೂ ಅವನ ಸಹಪಾಠಿಗಳದ್ದಾಯಿತು. ಮಠದ ಆವರಣ ಪ್ರವೇಶಿಸಿದ ನಂತರ ಶ್ರೀ ಶಿವಕುಮಾರಸ್ವಾಮಿಗಳ ಅಥವಾ ಮುಖ್ಯ ಉಪಾಧ್ಯಾಯರ ಕಚೇರಿಯಲ್ಲಿ ಒಂದು ಕುರ್ಚಿ ನನ್ನ ತಾಯಿಗೆ ಮೀಸಲು. ಪ್ರಾರ್ಥನೆ ಮುಗಿದು ಮೊದಲ ಪಿರಿಯಡ್ ಪ್ರಾರಂಭಕ್ಕೆ ಮುನ್ನ ಆಯಾ ತರಗತಿಯ ಉಪಾಧ್ಯಾಯರು ಬಂದು ನಮ್ಮ ತಾಯಿಯವರನ್ನು ಕರೆದೊಯ್ಯಬೇಕಿತ್ತು. ದಿನ ಮುಗಿಯುವವರೆಗೆ ಆ ತರಗತಿಯಲಿದ್ದು ಸಂಜೆ ಕಡೇ ಅವಧಿಯ ಉಪಾಧ್ಯಾಯರು ಕರೆದು ತಂದು ಪುನಃ ಮುಖ್ಯಉಪಾಧ್ಯಾಯರು ಅಥವಾ ಅವರಿಲ್ಲದಿದ್ದರೆ ಸ್ವಾಮೀಜಿಯವರ ಕಚೇರಿಯಲ್ಲಿ ಬಿಟ್ಟು ಹೋಗಬೇಕಿತ್ತು. ಊರಿನ ಹುಡುಗರು ಪುನಃ ಒಟ್ಟಾಗಿ ಬಂದು ನಮ್ಮ ತಾಯಿಯವರನ್ನು ಜತೆಗೆ ಕರೆದುಕೊಂಡು ಹೋಗಬೇಕಿತ್ತು.

ಈ ರೀತಿಯಲ್ಲಿ ಮೂರೂ ವರ್ಷಗಳನ್ನು ಮುಗಿಸಿ ಹತ್ತನೇ ತರಗತಿಯ ನಂತರ ಆಶೀರ್ವದಿಸಿ ಕಳಿಸಿಕೊಟ್ಟ ಗುರು ಶಿವಕುಮಾರ ಸ್ವಾಮಿಗಳು ಭಾರತೀಯ ಗುರು ಪರಂಪರೆಯಲ್ಲಿ ಒಂದು ಅಚ್ಚಳಿಯದ ಧ್ರುವತಾರೆ. ನಮ್ಮ ತಾಯಿಯವರು ಸೇರಿದ ಮರು ವರ್ಷದಿಂದ ಒಬ್ಬಬ್ಬರಾಗಿ ಕೆಲವಾರು ಹುಡುಗಿಯರು ಸೇರಿ ನಮ್ಮ ತಾಯಿಯವರ ಶಾಲೆ ಮುಗಿಸುವ ವೇಳೆಗೆ ಏಳೆಂಟು ಹುಡುಗಿಯರು ಮಠದ ಶಾಲೆಯಲ್ಲಿ ಓದುತ್ತಿದ್ದರಂತೆ. ಪ್ರಾದೇಶಿಕವಾಗಿ ಪ್ರಾರಂಭಿಸಿ ಇಡೀ ರಾಜ್ಯಕ್ಕೆ ಗದ್ದಲವಿಲ್ಲದೆ ಶಿಕ್ಷಣ ಕ್ರಾಂತಿಯನ್ನು ತಂದು 'ಹೆಣ್ಣೊಂದು ಕಲಿತರೆ ಊರೊಂದು ಕಲಿತಂತೆ' ಎಂಬ ನಾಣ್ಣುಡಿಗೆ ಜೀವತುಂಬಿದ ಸಂತ ಶಿವಕುಮಾರ ಸ್ವಾಮೀಜಿ.

ಅಂದು ಅವರು ಕೊಟ್ಟ ಶಿಕ್ಷಣದ ಕಾರಣ ಜೀವನದಲ್ಲಿ ಹಲವಾರು ಕಠಿಣ ಸವಾಲುಗಳನ್ನೆದುರಿಸುವ ಅನಿವಾರ್ಯಕ್ಕೆ ಸಿಲುಕಿದ ನಮ್ಮ ತಾಯಿ ಒಂದು ಕೆಲಸಕ್ಕೆ ಸೇರಿ ಮಕ್ಕಳನ್ನು ಓದಿಸಿ ಸಂಸಾರವನ್ನು ಸುಭದ್ರವಾಗಿ ನೆಲೆ ನಿಲ್ಲಿಸಲು ಇಂಬು ಕೊಟ್ಟಿತು. ಅಂದು ನನ್ನ ತಾಯಿಗೆ ಶಿಕ್ಷಕರಾಗಿದ್ದ ಸಿದ್ದಲಿಂಗಯ್ಯನವರು ನಾನು ಪದವಿಪೂರ್ವ ತರಗತಿಗೆ ಸೇರಿದಾಗ ಸಿದ್ಧಗಂಗಾ ಕಿರಿಯ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ಅವರ ಪತ್ನಿ ನನ್ನ ತಾಯಿಯ ನಂತರ ಮಠದ ಶಾಲೆಗೇ ಸೇರಿದ ಎರಡನೇ ವಿದ್ಯಾರ್ಥಿನಿ. ಅವರಿಬ್ಬರ ಮಗ ನನ್ನ ಸಹಪಾಠಿ ಹಾಗೂ ಗೆಳೆಯ, ಇಂದು ನಾನು ವೈದ್ಯ, ನನ್ನ ತಂಗಿ ಕಾಲೇಜಿನಲ್ಲಿ ಉಪನ್ಯಾಸಕಿ, ನನ್ನ ಅಣ್ಣ ಕೃಷಿಯ ಜತೆಗೆ ಕಾರ್ಖಾನೆಯೊಂದರಲ್ಲಿ ಮೇಲ್ವಿಚಾರಕ. ನಾವು ಮೂವರು ನಮ್ಮ ಕೈಲಾದಷ್ಟು ಸಮಾಜಕ್ಕೆ ನಮ್ಮ ಋಣ ತೀರಿಸುತ್ತಿದ್ದೇವೆ ಎಂದರೆ ಅದರ ಪುಣ್ಯಫಲವು ಸ್ವಾಮೀಜಿಗಳಿಗಲ್ಲದೆ ಇನ್ಯಾರಿಗೆ ತಾನೇ ಸಂದೀತು?



ಯೋಜನೆಗಳ ಹೆಸರಿನಲ್ಲಿ ಪ್ರಜೆಗಳ ಹಣವನ್ನು ಲೂಟಿ ಹೊಡೆಯುತ್ತಾ ಮಠಕ್ಕೆ ಬಿಡಿಗಾಸಿನ ದೇಣಿಗೆ ಕೊಡದೆ 'ನನ್ನ ಆಯುಷ್ಯವನ್ನು ದೇವರು ಸ್ವಾಮೀಜಿಗೆ ಕೊಡಲಿ' ಎಂಬ ಭ್ರಷ್ಟರು, ನಾಲಾಯಕ್ ಮಗನ ಚಲನ ಚಿತ್ರಕ್ಕೆ ಕೋಟ್ಯಂತರ ಸುರಿದು ಬಡ ರೈತರ ಬಾಳಿಗೆ ವಿಷ ಉಣಿಸುವ ದುಷ್ಟರು, ಸ್ವಾಮಿಗಳ ಮರಣ ಸಮಯದಲ್ಲಿ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳುವ ಆಲೋಚನೆ ಬಿಟ್ಟು ಯಾವುದೋ ಪ್ರಶಸ್ತಿಯ ಹೆಸರಲ್ಲಿ ಬೇಳೆ ಬೇಯಿಸಿಕೊಳ್ಳುವ ಆಷಾಢಭೂತಿಗಳು, ಜಾತ್ಯತೀತ ಎನ್ನುತ್ತಾ ಜಾತಿಗಳನ್ನು ಒಡೆಯುವ ಊಸರವಳ್ಳಿಗಳು, ಸಮಾನತೆ ಎಂದು ಬೊಬ್ಬಿರಿಯುತ್ತಲೇ ಓಲೈಕೆ ರಾಜಕಾರಣ ಮಾಡುವ ಕುತಂತ್ರಿಗಳು ಇವರೆಲ್ಲರ ನಡುವೆ ಕಾಯಾ ವಾಚಾ ಮಾನಸಾ ಜನತೆಯ ಏಳಿಗೆಗೆ ದುಡಿದು ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದ ಮಹಾಪುರುಷ ತನ್ನ ಆದರ್ಶಗಳನ್ನು ಸಹೃದಯರಿಗೆ ಬಿಟ್ಟುಕೊಟ್ಟು ಇಹಲೋಕದ ಯಾತ್ರೆ ಮುಗಿಸಿದ್ದಾರೆ.

ವ್ಯವಸ್ಥೆಯನ್ನು ಸದಾ ಟೀಕಿಸುತ್ತಾ, ದೇಶದ್ರೋಹಿಗಳನ್ನು ಬೆಂಬಲಿಸುತ್ತಾ, ಭಾರತವನ್ನು ಒಡೆಯುತ್ತೇನೆ ಎಂಬುವರಿಗೆ ಇಂಬು ಕೊಡುತ್ತಾ, ಮಹಿಳಾವಾದ ಎಂಬ ಹೆಸರಲ್ಲಿ ತಾವೇ ಮಹಿಳೆಯ ಶೋಷಣೆಗೆ ಇಳಿಯುವ ಹಲವಾರು ಆತ್ಮವಂಚಕರಿಗೆ ಪ್ರಶಸ್ತಿಗಳು ಕೊಡಲ್ಪಟ್ಟು ಅವು ತಮ್ಮ ಬೆಲೆಯನ್ನು ಎಂದೋ ಕಳೆದುಕೊಂಡಿವೆ. ಅಂತಹ ಪ್ರಶಸ್ತಿ, ಫಲಾಫಲಗಳ ಅಪೇಕ್ಷೆಯಿಲ್ಲದೆ ಪೂಜೆಯೆಯೆಂಬ ಭಾವದಲ್ಲಿ ತ್ರಿವಿಧ ದಾಸೋಹ ನಡೆಸಿದ ಸ್ವಾಮೀಜಿಗಳಿಗೇಕೆ ಪ್ರಶಸ್ತಿ ಪುರಸ್ಕಾರದ ಹಂಗು?

ತನ್ನ ಸಂಪರ್ಕಕ್ಕೆ ಬಂದ ಭಾರತದ ಪ್ರತಿಯೊಬ್ಬ ಸತ್ಪ್ರಜೆಯ ಎದೆಯಲ್ಲಿ ರತ್ನವಾಗಿ, ಸ್ವಯಂ ಪ್ರಕಾಶಿಯಾಗಿ ಬೆಳಗುವ ಈ ಸಂತನಿಗೇಕೆ ಭಾರತ ರತ್ನ?

# ವಿಶಿಷ್ಟ ವೈದ್ಯಕೀಯ ಸಾಧನೆಗಳ ವೈದ್ಯರಿಗೆ 'ಪದ್ಮ'

ಅಭಿನಂದನೆ



ಡಾ.ದಯಾನಂದ ಲಿಂಗೇಗೌಡ ರೇಡಿಯಾಲಜಿಸ್ಟ್
editoped@vishwavani.news

ಈ ಬಾರಿಯ ಪದ್ಮಶ್ರೀ ಪ್ರಶಸ್ತಿಯನ್ನು ಭಾರತದ ಅಸ್ಥಿ ಮಜ್ಜೆ ಕಸಿ (ಬೋನ್ ಮ್ಯಾರೊ ಟ್ರಾನ್ಸ್‌ಪ್ಲಾಂಟ್) ಪಿತಾಮಹ ಎಂದೇ ಹೆಸರಾಗಿರುವ ಡಾ. ಮಾಮನ್ ಚಾಂಡಿಯವರಿಗೆ ಘೋಷಿಸಲಾಗಿದೆ. ಆ ಮೂಲಕ ಪ್ರಶಸ್ತಿಯ ಗೌರವವನ್ನು ಹೆಚ್ಚಿಸುವ ಕೆಲಸವನ್ನು ಆಯ್ಕೆ ಸಮಿತಿ ಮಾಡಿದ್ದಾರೆ ಎಂದರೆ ತಪ್ಪಾಗಲಾರದು. ಅದಕ್ಕೆ ಸರಕಾರವನ್ನು ಅಭಿನಂದಿಸಲೇಬೇಕು.

ಕೋಲ್ಕತಾದ ಟಾಟಾ ಮೆಡಿಕಲ್ ಸೆಂಟರ್ ಆಸ್ಪತ್ರೆಯ ಸಂಸ್ಥಾಪಕ ನಿರ್ದೇಶಕರಾಗಿರುವ ಡಾ.ಚಾಂಡಿರವರಿಗೆ ಪ್ರಶಸ್ತಿಯ ಬಂದಿರುವ ವಿಷಯ ತಿಳಿದಾಗ, ಆಶ್ಚರ್ಯ, ಸಂತೋಷ ಎರಡೂ ಒಟ್ಟಿಗೆ ಆದವು. ಆಶ್ಚರ್ಯವೇಕೆಂದರೆ ಐದು ವರ್ಷಗಳಿಂದ ಅವರೊಟ್ಟಿಗೆ ಸಹದ್ಯೋಗಿಯಂತೆ ಕೆಲಸ ಮಾಡುತ್ತಿರುವ ನನಗೆ, ಇವರು ಎಷ್ಟು ದೊಡ್ಡ ವ್ಯಕ್ತಿ ಎಂದು ಗೊತ್ತಿರಲಿಲ್ಲ. ಇದಕ್ಕೆ ನನ್ನ ಅಜ್ಞಾನ ಎಷ್ಟು ಕಾರಣವೋ, ಅಷ್ಟೇ ಅವರ ಹಮ್ಮು ಬಿಮ್ಮು ಇಲ್ಲದ ಸರಳತೆ ಕಾರಣ. ಸಾಮಾನ್ಯವಾಗಿ ನಿರ್ದೇಶಕರಂಥ ಉನ್ನತ ಹುದ್ದೆಯಲ್ಲಿ ಇರುವವರು, ಕೆಲಸವಿದ್ದಾಗ ಇತರ ವೈದ್ಯರನ್ನು ತಮ್ಮ ಆಫೀಸಿಗೆ ಕರೆಸಿ ಮಾತನಾಡಿಸಿದರೆ, ಡಾ.ಚಾಂಡಿಯವರು ರೋಗಿಗಳಿಗೆ ತೊಂದರೆಯಾಗಬಾರದು ಎಂದು ವೈದ್ಯರಿದ್ದಲ್ಲಿಗೇ ಹೋಗಿ ಮಾತನಾಡಿಸುವುದು ಅವರ ಸರಳತೆಗೆ ಒಂದು ಸಣ್ಣ ನಿದರ್ಶನ.

ಅನೇಕ ದಶಮಾನಗಳ ಹಿಂದೆಯೇ ಪ್ರಸ್ತುತದಲ್ಲಿರುವ ಚಿಕಿತ್ಸೆಯನ್ನುಇಂದು ಮಾಡಿ 'ರಾಜ್ಯ ಅಥವಾ ಜಿಲ್ಲೆ , ತಾಲೂಕಿನಲ್ಲಿಯೇ ಮೊದಲ ಬಾರಿಗೆ ಅಪರೂಪದ ಚಿಕಿತ್ಸೆ' ಎಂದು ಮಾಧ್ಯಮದಲ್ಲಿ ಕಾಣಿಸಿಕೊಳ್ಳುವ ವೈದ್ಯರುಗಳ ನಡುವೆ ಡಾ.ಚಾಂಡಿಯವರು ಭಿನ್ನವಾಗಿ ನಿಲ್ಲುತ್ತಾರೆ. ಭಾರತದಲ್ಲಿ ತಮ್ಮ ಕ್ಷೇತ್ರದ ಹತ್ತು ಹಲವು ಮೊತ್ತ ಮೊದಲುಗಳಿಗೆ ಅವರು ಕಾರಣೀಕರ್ತ. ಜನಿಸಿದ್ದು ಕೇರಳವಾದರೂ, ಕರ್ಮಭೂಮಿ ತಮಿಳುನಾಡು ಆಗಿತ್ತು. ಕಳೆದ ಏಳೆಂಟು ವರ್ಷಗಳಿಂದ ಕೋಲ್ಕತಾ ನಗರದಲ್ಲಿ ಕಾರ್ಯನಿರತರಾಗಿದ್ದಾರೆ.

ಹಲವು ದಶಕಗಳ ಹಿಂದೆ ಭಾರತದಲ್ಲಿ ರಕ್ತ ಸಂಬಂಧಿತ ಎಲ್ಲ ರೋಗಗಳಿಗೆ ಇಡೀ ರಕ್ತವನ್ನೇ ಕೊಡುವ ಚಿಕಿತ್ಸೆ ಪ್ರಚಲಿತದಲ್ಲಿತ್ತು. ಇದರಿಂದ ಅನಗತ್ಯವಾಗಿ ರಕ್ತ ವ್ಯರ್ಥವಾಗುತಿತ್ತು. ರಕ್ತದಲ್ಲಿರುವ ನಾನಾ ಅಂಶಗಳನ್ನು ಬೇರ್ಪಡಿಸಿ ರೋಗಿಗೆ ಅಗತ್ಯವಿರುವ ಅಂಶವನ್ನು ಮಾತ್ರ ಕೊಡುವ ಪದ್ಧತಿಯನ್ನು ಭಾರತದಲ್ಲಿ ಜಾರಿಗೆ ತಂದವರಲ್ಲಿ ಡಾ.ಚಾಂಡಿ ಮೊದಲಿಗರು. ಭಾರತದಲ್ಲಿ ರಕ್ತ ಕ್ಯಾನ್ಸರ್‌ಗಳಿಗೆ, ಅಸ್ಥಿ ಮಜ್ಜೆ ಕಸಿ (ಬೋನ್ ಮ್ಯಾರೋ ಟ್ರಾನ್ಸ್ ಪ್ಲಾಂಟ್) ಚಿಕಿತ್ಸೆಯನ್ನು ಮೊಟ್ಟ ಮೊದಲು ಮಾಡಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಸತತ ನಲ್ವತ್ತೆರಡು ವರುಷದ, ವೆಲ್ಲೂರಿನ ಪ್ರತಿಷ್ಠಿತ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ ಡಾ.ಚಾಂಡಿ, ಅಲ್ಲಿ ದೇಶದಲ್ಲಿಯೇ ಮೊದಲ ರಕ್ತ ರೋಗಗಳ ವಿಭಾಗ ಪ್ರಾರಂಭಿಸಿದರು. ಅವರ ಸೇವಾ ಅವಧಿಯಲ್ಲಿ ಹಲವಾರು ವೈದ್ಯರಿಗೆ ತರಬೇತಿ ನೀಡಿ ದೇಶಾದ್ಯಂತ ರಕ್ತ ಸಂಬಂಧಿತ ರೋಗಗಳ ಚಿಕಿತ್ಸೆಗೆ ಪರೋಕ್ಷವಾಗಿ ನೆರವಾಗಿದ್ದಾರೆ. ವೆಲ್ಲೂರಿನಲ್ಲಿ ನಿವೃತ್ತಿ ಪಡೆದ ನಂತರ 2011ರಿಂದ ಕೋಲ್ಕತಾ ಟಾಟಾ ಮೆಡಿಕಲ್ ಸೆಂಟರ್ ಆಸ್ಪತ್ರೆಯ ಸಂಸ್ಥಾಪಕ ನಿರ್ದೇಶಕರಾಗಿ ಇಂದಿಗೂ ಸೇವೆ ಸಲ್ಲಿಸುತ್ತಿದ್ದಾರೆ. ಅವರಿಗೆ 2016ರಲ್ಲಿ ವೈದ್ಯರಿಗಾಗಿ ಇರುವ ಅತ್ಯುನ್ನತ ಬಿ.ಸಿ.ರಾಯ್ ಪ್ರಶಸ್ತಿ ದೊರಕಿದೆ.

ಡಾ.ಚಾಂಡಿ ಬರೀ ಚಿಕಿತ್ಸೆಗೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಳ್ಳಲಿಲ್ಲ. ರೋಗಿಗಳ ಭಾವನೆಗಳ ಅನುಭೂತಿಗೆ ಅವರು ಎಷ್ಟು ಮಹತ್ವ ಕೊಡುತ್ತಾರೆ ಎಂಬುದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಅಸ್ಥಿ ಮಜ್ಜೆ ಕಸಿ ಮಾಡಿಕೊಳ್ಳುವ ರೋಗಿಗಳು ಪಡುವ ಮಾನಸಿಕ ತುಮುಲವನ್ನು ಅರಿಯಲು, ವಿಲಕ್ಷಣ ಮಾರ್ಗವನ್ನು ಈ ಮೇರು ವೈದ್ಯ ಅನುಸರಿಸಿದರು. ತಮಗೆ ಯಾವುದೇ ರೋಗ ಇಲ್ಲದಿದ್ದರೂ, ಅಸ್ಥಿ ಮಜ್ಜೆ ಸೇದುವ (ಬೋನ್ ಮ್ಯಾರೋ ಆಸ್ಪಿರೇಷನ್ ) ಪ್ರಕ್ರಿಯೆಗೆ ತಮ್ಮ ದೇಹವನ್ನು ಒಳಗಾಗಿಸಿದರು. ತಮ್ಮ ಬಳಿ ಬರುವ ಯಾವ ರೋಗಿಗಳು ಹಣಕಾಸಿನ ಮುಗ್ಗಟ್ಟಿನಿಂದ, ಚಿಕಿತ್ಸೆ ನಿರಾಕರಿಸಬಾರದೆಂದು ದಾನಿಗಳಿಂದ ನಿಧಿ ಸಂಗ್ರಹಿಸಿ ಚಿಕಿತ್ಸೆ ಕೊಡಿಸುತ್ತಿದ್ದಾರೆ. ಇದರಿಂದ ಲಕ್ಷಾಂತರ ರೋಗಿಗಳು ಉಪಕೃತರಾಗಿದ್ದಾರೆ.

ಪದ್ಮಶ್ರೀ ಪ್ರಶಸ್ತಿ ಘೋಷಣೆಗೊಂಡ ದಿನ ಇಡೀ ಆಸ್ಪತ್ರೆಯಲ್ಲಿ ಹಬ್ಬದ ವಾತಾವರಣವಿದ್ದರೆ, ಡಾ. ಚಾಂಡಿಯವರು ಮಾತ್ರ ತಮ್ಮ ದಿನ ನಿತ್ಯದ ಕೆಲಸದಲ್ಲಿ ಮಗ್ನರಾಗಿ, ಎಲ್ಲ ರೋಗಿಗಳ ಚಿಕಿತ್ಸೆ ಮುಗಿಯುವವರೆಗೂ ಕೊಠಡಿಯಿಂದ ಹೊರಬರಲೇ ಇಲ್ಲ. ಒತ್ತಾಯದ ಮೇರೆಗೆ



ಅಭಿನಂದನಾ ಕಾರ್ಯಕ್ರಮದಲ್ಲಿ ಮುಜುಗರದಿಂದಲೇ ಭಾಗವಹಿಸಿದ ಇಳಿ ವಯಸ್ಸಿನ ಡಾ.ಚಾಂಡಿಯವರು ಹೇಳಿದ್ದು, ಎಲ್ಲರ ಕಣ್ಣುಗಳಲ್ಲಿ ನೀರು ತರಿಸಿತ್ತು. 'ನನಗೆ ಪ್ರಶಸ್ತಿ ಬಂದಿರುವುದು ನನಗೆ ವಿಶೇಷವೆನಿಸಲಿಲ್ಲ. ಆದರೆ ಅದನ್ನು ಸಂಭ್ರಮಿಸುತ್ತಿರುವ ಲಕ್ಷಾಂತರ ಜನಗಳನ್ನು ನೋಡಿ ಸಂತೋಷ ವೆನಿಸುತ್ತಿದೆ. ನಾನು ದೇವರಲ್ಲಿ ಬೇಡಿಕೊಳ್ಳುವುದಿಷ್ಟೇ. ನಾನು ಯಾರಿಗೂ ಪ್ರಯೋಜನವಿಲ್ಲವೆಂದಾಗ, ಆ ಕ್ಷಣವೇ ಸಾವು ನನ್ನನ್ನು ಅಪ್ಪಿಕೊಳ್ಳಲಿ.'

ಅಲ್ಲಿ ಉಪಸ್ಥಿತರಿದ್ದ ಡಾ.ಚಾಂಡಿಯವರ ಪತ್ನಿ ಮಾತು ಕೂಡ ಮಾರ್ಮಿಕವಾಗಿತ್ತು: 'ನಾನು ಡಾ.ಚಾಂಡಿರವರನ್ನು ಕಾನೂನಿನ ಪ್ರಕಾರ ಮದುವೆಯಾಗಿದ್ದರೂ, ತಾಂತ್ರಿಕವಾಗಿ ಅವರು ಮದುವೆಯಾಗಿರುವುದು ಅವರ ರೋಗಿಗಳನ್ನು. ಹಗಲು ರಾತ್ರಿ ರೋಗಿಗಳಿಗೆ ಸಿಗುವ ಡಾ.ಚಾಂಡಿ, ಕುಟುಂಬದ ಜತೆ ಕಾಲ ಕಳೆಯುವುದು ಕಡಿಮೆಯೇ. ಅವರ ಮಹಾನ್ ಕಾರ್ಯಕ್ಕೆ ತೊಂದರೆಯಾಗದಿರಲಿ ಎಂದು ಕುಟುಂಬದ ಎಲ್ಲ ಕೆಲಸಗಳನ್ನು ನಾನೇ ನಿರ್ವಹಿಸಿದ್ದೇನೆ' ಎಂದರವರು. ಡಾ. ಚಾಂಡಿಯವರ ಪತ್ನಿ ಹೇಳಿದ ಮಾತು ಬಹುತೇಕ ವೈದ್ಯ ಪತ್ನಿಯರ ಭಾವನೆಯನ್ನು ಪ್ರತಿನಿಧಿಸಿದಂತೆ ಇತ್ತು. ಈ ಸಂದರ್ಭದಲ್ಲಿ ಯಾರೋ ಹೇಳಿದ ಮಾತು ನೆನಪಿಗೆ ಬರುತ್ತದೆ.' ಸಂತೋಷವಾಗಿರುವ ಒಬ್ಬ ವೈದ್ಯ ಪತ್ನಿ ತೋರಿಸಿ, ನೋಡೋಣ. ಹಾಗೇನಾದರೂ ವೈದ್ಯರ ಪತ್ನಿ ಸಂತೋಷವಾಗಿದ್ದರೆ, ಅವರ ಪತಿಗೆ ರೋಗಿಗಳಿಲ್ಲ ಎಂದು ಖಚಿತವಾಗಿ ಹೇಳಬಹುದು!' ಹಾಗೆ ವೈದ್ಯವೃತ್ತಿಗೆ ವೈದ್ಯರು ಮಾತ್ರವಲ್ಲದೆ ಅವರ ಕುಟುಂಬದ ಸದಸ್ಯರು ಕೂಡ ತ್ಯಾಗ ಮಾಡಬೇಕಾಗುತ್ತದೆ.

ವೈದ್ಯಕೀಯ ಕ್ಷೇತ್ರದ ಸಣ್ಣ ಋಣಾತ್ಮಕ ಸುದ್ದಿ ಸಿಕ್ಕರೂ ಪ್ರಸಾರ ಮಾಡುವ ಮಾಧ್ಯಮಗಳು, ಇಂತಹ ಧನಾತ್ಮಕ ಸುದ್ದಿಗಳಿಗೆ ಜಾಗವನ್ನೇ ಕೊಡುವುದಿಲ್ಲ ಎಂಬ ಬೇಸರವಿದೆ. ರಾಜಕಾರಣಿಗಳು ಬೈದಾಡಿಕೊಂಡಿದ್ದನ್ನು ಪ್ರಮುಖ ಪುಟದಲ್ಲಿ ಸುದ್ದಿ ಮಾಡುವ ಪತ್ರಿಕೆಗಳು, ಪ್ರಶಸ್ತಿ ಬಂದ ಸುದ್ದಿಯನ್ನು ಒಂದು ಸಾಲಿಗೆ ಸೀಮಿತಗೊಳಿಸಿದ್ದಾರೆ. ಸಿನಿಮಾ ನಟರು ಏದುಸಿರು ಬಿಟ್ಟರೂ, ಅರ್ಧ ಗಂಟೆ ಕಾರ್ಯಕ್ರಮ ಮಾಡಿ ತೋರಿಸುವ ದೃಶ್ಯ ಮಾಧ್ಯಮಗಳು, ವೈದ್ಯರಿಗೆ ಸಲ್ಲಿದ ಪದ್ಮಶ್ರೀಯ ಬಗ್ಗೆ ಒಂದು ಸಾಲು ಕೂಡ ತೋರಿಸದೆ ಇದ್ದುದ್ದಕ್ಕೆ ಏನೆನ್ನಬೇಕೋ ತಿಳಿಯುತ್ತಿಲ್ಲ. ಡಾ.ಚಾಂಡಿಯಂತಹ ವೈದ್ಯರುಗಳು ತಮ್ಮ ಬಗ್ಗೆ ತಾವು ಎಂದಿಗೂ ಹೇಳಿಕೊಳ್ಳುವುದಿಲ್ಲ. ಆದರೆ ಅವರ ಬಗ್ಗೆ ಸುತ್ತಮುತ್ತಲಿನ ಜನರು ಬರೆಯದೆ ಇದ್ದರೆ ಅದು ಅವರ ಲೋಪವಾಗುತ್ತದೆ.

# ಸಾರ್! ಸ್ವಲ್ಪ ಜೋರಾಗಿ 'ಹ್ಹೂ-ಹ್ಹೂ' ಎನ್ನಿ!

ಕ್ಷಣ ಹೊತ್ತು ಆಣಿ ಮುತ್ತು



ಎಸ್.ಷಡಕ್ಷರಿ
editoped@vishwavani.news

ಹೌದು! ನಮಗೂ ಸ್ಥಳೀಯ ಪೊಲೀಸರು ಸಂಜೆಯ ಹೊತ್ತು ನಮ್ಮ ವಾಹನಗಳನ್ನು ನಿಲ್ಲಿಸಿರಬಹುದು! ಒಂದು ಪುಟ್ಟ ಯಂತ್ರವನ್ನು ನಮ್ಮ ಮುಖದ ಬಳಿ ತಂದಿರಬಹುದು! ಸಾರ್ ಸ್ವಲ್ಪ ಜೋರಾಗಿ ಹ್ಹೂ-ಹ್ಹೂ ಎನ್ನಿ ಎಂದಿರಬಹುದು! ಆನಂತರ ಆ ಯಂತ್ರವನ್ನು ನೋಡಿ, ನಾವು ಮಾದಕ ಪಾನೀಯ ಸೇವಿಸಿದ್ದೇವೆಯೋ ಇಲ್ಲವೋ ಎಂಬುದನ್ನು ತೀರ್ಮಾನಿಸುತ್ತಾರಲ್ಲವೇ? ಮುಂದೆ ಪೊಲೀಸರು ಏನು ಮಾಡುತ್ತಾರೆ ಎಂಬುದನ್ನು ಪಕ್ಕಕ್ಕಿಡೋಣ. ಆದರೆ ಪೊಲೀಸರು ಈ ಪದ್ಧತಿಯನ್ನು ಏಕೆ ಅನುಸರಿಸುತ್ತಾರೆಂಬುದರ ಬಗ್ಗೆ ತಿಳಿದುಕೊಳ್ಳೋಣ.

ಆಕೆಯ ಹೆಸರು ಕ್ಯಾಂಡೀ ಲೈಟ್ನರ್. ಅಮೆರಿಕಾ ನಿವಾಸಿಯಾಗಿದ್ದ ಆಕೆಯ ಹದಿಮೂರು ವರ್ಷದ ಒಬ್ಬಳೇ ಮಗಳು ಕ್ಯಾರೀ ಕಾರಿಗೆ ಸಿಕ್ಕಿ 1980ರಲ್ಲಿ ಸತ್ತು ಹೋದಳು. ಮಗಳದೇನೂ ತಪ್ಪಿರಲಿಲ್ಲ. ತನ್ನ ಪಾಡಿಗೆ ತಾನು ರಸ್ತೆಯಲ್ಲಿ ನಡೆದು ಹೋಗುತ್ತಿದ್ದಳು. ಎಲ್ಲಿಂದಲೋ ಅಡ್ಡಾದಿಡ್ಡಿಯಾಗಿ ನುಗ್ಗಿ ಬಂದ ಕಾರು ಆಕೆಯ ಮೇಲೆ ಹರಿದುಹೋಯಿತು. ಆಕೆ ಸ್ಥಳದಲ್ಲೇ ಸಾವನ್ನಪ್ಪಿದಳು. ಲೈಟ್ನರ್ ತನಗಿದ್ದ ಒಬ್ಬಳೇ ಮಗಳ ಅಂತ್ಯಕ್ರಿಯೆ ಮಾಡಿ ಮನೆಗೆ ಮರಳಿದಾಗ ಮನೆ ಬಿಕೋ ಎನಿಸುತ್ತಿತ್ತು. ಮನ ಶೋಕಿಸುತ್ತಿತ್ತು.

ಮರುದಿನ ಪೊಲೀಸ್ ಸ್ಟೇಷನ್ನಿಗೆ ಹೋದಾಗ ಆಕೆಗೆ ತನ್ನ ಮಗಳ ಸಾವಿಗೆ ಕಾರಣನಾದ ಚಾಲಕನ ಬಗ್ಗೆ ಅನೇಕ ವಿಷಯಗಳು ತಿಳಿದುಬಂದವು. ಆತ ಅಷ್ಟುಹೊತ್ತಿಗಾಗಲೇ ನಾಲ್ಕು ಬಾರಿ ಕುಡಿದು ಕಾರು ಚಲಾಯಿಸಿ ಅಪಘಾತ ಮಾಡಿ ನಾಲ್ಕು ಜನರ ಬಲಿತೆಗೆದುಕೊಂಡಿದ್ದ. ನಾಲ್ಕು ಬಾರಿ ಬಂಧನಕ್ಕೆ ಒಳಗಾಗಿದ್ದ. ಆಕೆಯ ಮಗಳ ಸಾವಿಗೆ ಎರಡೇ ದಿನದ ಮುಂಚೆ ಮತ್ತೊಂದು ಅಪಘಾತ ಮಾಡಿದ್ದ. ಬಂಧನಕ್ಕೆ ಒಳಗಾಗಿದ್ದ. ಜಾಮೀನು ಪಡೆದು ಹೊರಬಂದು ಮತ್ತೆ ಕುಡಿದು ಕಾರು ಚಲಾಯಿಸಿ ಆಕೆಯ ಮಗಳ ಸಾವಿಗೆ ಕಾರಣನಾಗಿದ್ದ. ಮತ್ತೆ ಬಂಧನಕ್ಕೆ ಒಳಗಾಗಿದ್ದರೂ, ಜಾಮೀನು ಪಡೆದು ಹೊರಬರುವುದರಲ್ಲಿದ್ದ.

ಇದೆಲ್ಲವನ್ನೂ ಕೇಳಿದ ಲೈಟ್ನರ್‌ಗೆ ಮೈಯೆಲ್ಲ ಉರಿದುಹೋಯಿತು. ಇಂತಹ ಅಪಘಾತ ಸರಣಿಗಳನ್ನು ಮಾಡುವವರಿಗೆ ಧಾರಾಳವಾಗಿ ಜಾಮೀನು ಕೊಡುವ ಸರಕಾರಿ ಕಾನೂನುಗಳ ಬಗ್ಗೆ ಸಿಟ್ಟು ಬಂತು. ಆದರೆ ಆಕೆ ಸಿಟ್ಟುಗೊಂಡು ಸುಮ್ಮನೆ ಕೂರಲಿಲ್ಲ. ಇದರ ಬಗ್ಗೆ ಏನಾದರೂ ಮಾಡಬೇಕೆಂದು ತೀರ್ಮಾನಿಸಿದಳು.

ಕುಡಿದು ಕಾರು ಚಲಾಯಿಸಿ ನಡೆದ ಅಪಘಾತಗಳಲ್ಲಿ ಮಕ್ಕಳನ್ನು ಕಳೆದುಕೊಂಡ ನತದೃಷ್ಟರ ತಾಯಂದಿರ ಸಂಘವನ್ನು ಕಟ್ಟಿದಳು. ಅದಕ್ಕೆ 'ಮದರ್ಸ್ ಎಗೈನ್ಸ್ಟ್ ಡ್ರಂಕನ್




ಡ್ರೈವಿಂಗ್' (ಎಂ.ಎ.ಡಿ.ಡಿ) ಎಂದು ಹೆಸರಿಟ್ಟಳು. ಆಕೆಗೆ ಸಂಘಕ್ಕೆ ಸದಸ್ಯೆಯರನ್ನು ಸೇರಿಸಲು ಕಷ್ಟವಾಗಲಿಲ್ಲ, ಏಕೆಂದರೆ ಅಮೆರಿಕಾದಲ್ಲಿ ಪ್ರತಿವರ್ಷ ಹದಿನೈದು ಸಾವಿರಕ್ಕೂ ಹೆಚ್ಚು ಜನ ಕುಡಿದು ಕಾರು ಚಲಾಯಿಸಿದವರ ಅಪಘಾತಗಳಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದರಂತೆ! ಎಂ.ಎ.ಡಿ.ಡಿ. ಸಂಘ ಸರಸರನೆ ಬೆಳೆಯುತ್ತ ಹೋಯಿತು. ಅದರ ಶಕ್ತಿಯೂ ಬೆಳೆಯುತ್ತಾ ಹೋಯಿತು. ಅದರ ಒತ್ತಾಯಕ್ಕೆ ಮಣಿದು ಅಲ್ಲಿನ ಸರಕಾರ ಅನೇಕ ಸುಧಾರಣೆಗಳನ್ನು ತಂದಿತು.

ಅವುಗಳಲ್ಲಿ ಮುಖ್ಯವಾದವುಗಳು:

- ಕುಡಿದು ಕಾರು ಚಲಾಯಿಸುವುದು ಕೊಲೆಯಷ್ಟೇ ತೀವ್ರ ಅಪರಾಧವೆಂಬ ಚಿಂತನೆ ಮೊದಲಾಯಿತು.
- ಅಂತಹ ಚಾಲಕರ ಡ್ರೈವಿಂಗ್ ಲೈಸನ್ಸುಗಳನ್ನು ರದ್ದು ಮಾಡಲಾಗುತ್ತಿತ್ತು.
- ಮುಖ್ಯರಸ್ತೆಗಳಲ್ಲಿ ಕಾರು ನಿಲ್ಲಿಸಿ ಚಾಲಕರ ತಪಾಸಣೆ ಮಾಡಿ ಅವರ ರಕ್ತ ಪರೀಕ್ಷೆ ಮಾಡಿ ರಕ್ತದಲ್ಲಿನ ಆಲ್ಕೋಹಾಲ್ ಮಟ್ಟವನ್ನು ಪರೀಕ್ಷಿಸುವ ಪದ್ಧತಿ ಮೊದಲಾಯಿತು.

ಈಗ ಸಂಘ ವಿಶ್ವದ ಅನೇಕ ದೇಶಗಳಲ್ಲಿ ಸಾವಿರಾರು ಶಾಖೆಗಳನ್ನು ಹೊಂದಿದೆ. ಲಕ್ಷಾಂತರ ಮಂದಿ ಸ್ವಯಂ ಸೇವಕರಿದ್ದಾರೆ. ಬಲಿಷ್ಠವಾಗಿರುವ ಈ ಸಂಸ್ಥೆ ಸರಕಾರಗಳನ್ನು ಅಲುಗಾಡಿಸುವಷ್ಟು ದೊಡ್ಡದಾಗಿ ಬೆಳೆದಿದೆ!

ಮುಂದಿನ ಬಾರಿ ನಿಮ್ಮ ಊರಿನ ಪೊಲೀಸರು ನಿಮ್ಮ ಕಾರನ್ನು ತಡೆದು, ಸಾರ್ ನಿಮ್ಮ ರಕ್ತದಲ್ಲಿನ ಆಲ್ಕೋಹಾಲ್ ಮಟ್ಟ ಪರೀಕ್ಷಿಸಿದರೆ, ಅವರ ಮೇಲೆ ಸಿಟ್ಟಾಗಬೇಡಿ. ಕುಡಿದು ಕಾರು ಚಲಾಯಿಸಿದವರಿಂದಾಗುವ ಅಪಘಾತಗಳಲ್ಲಿ ಮಗನನ್ನೋ, ಮಗಳನ್ನೋ, ಗಂಡನನ್ನೋ ಕಳೆದುಕೊಂಡು ಅಳುವವರನ್ನು ನೆನೆಸಿಕೊಳ್ಳಿ! ಮ್ಯಾಡ್ಡ್ ಸಂಸ್ಥೆಯ ಸದಸ್ಯರ ನೋವು ಕಡಿಮೆ ಆಗಲಿ ಎಂದು ಹಾರೈಸಿ!

ಲಿಂಬೆಹುಳಿ
ನಕ್ಷತ್ರಿಕ

## ಪಿಚ್ಚರ್ ಬಿಡಿಸಿದ ಕುಮಾರ

ಹೇಳಿ ಕೇಳಿ ಎಚ್.ಡಿ. ಕುಮಾರಸ್ವಾಮಿಗಳು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಉರ್ಫ್ ಚಿತ್ರ ನಿರ್ಮಾಪಕರು. ಇಂಥವರಿಗೇ ಪಿಚ್ಚರ್ ತೋರಿಸಲು ಹೋಗಿ ಸ್ವತಃ ಸನ್ಮಾನ್ಯ ಶ್ರೀ ಮಾಜಿ ಮುಖ್ಯಮಂತ್ರಿಗಳು ಬಿ.ಎಸ್. ಯಡಿಯೂರಪ್ಪ ಪಿಚ್ಚರ್ ಬಿಡಿಸ್ಕೊಂಡಿದಾರೆ. ಅದ್ಯಾವುದೇ ಬೆಲೆ ತೆತ್ತಾದರೂ ಸರಿ ನಾನು ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಂತೇ ತೀರ್ತೆನೆ ಅಂತಾ ಬಿಎಸ್‌ವೈ ಕತ್ತಿ ಹಿಡ್ಕೊಂಡು ಓಡಾಡ್ತಾ ಇದ್ರು. ಗುರುಮಠಕಲ್ ಶಾಸಕನ ನಾಗನಗೌಡಗೆ ಪುತ್ರ ಶರಣಗೌಡ ಮುಖಾಂತರ ಆಪರೇಷನ್ ಮಾಡೋಕೆ ಹೋಗಿ ಸ್ವತಃ ಆಪರೇಷನ್ ಮಾಡ್ಕೊಳ್ಳೋ ಹಾಗೆ ಆಗಿದೆ. ನಾಗನಗೌಡಗೆ ಬಿಎಸ್‌ವೈ ಆಪರೇಷನ್ ಮಾಡೋಕೆ ಹೊರಟಾರೆ ಅಂತಾ ಸುದ್ದಿ ತಿಳದಿದ್ದೇ ತಡಾ, ಚಿತ್ರ ನಿರ್ಮಾಪಕ ಎಚ್ಡಿಕೆ ಕ್ಯಾಮರಾ ಹಿಡ್ಕೊಂಡು ನಿಂತು ಬಿಟ್ರು. ಎಲ್ಲಾ ಮಾತೂ ರೆಕಾರ್ಡ್ ಮಾಡ್ತಾ ಹೋದ್ರು. ಪಾಪ ಬಿಎಸ್‌ವೈ ಅಬಕಿ ಬಾರ್ ಮೇರಿ ಸರಕಾರ ಅಂತಾ ಖುಷಿ ಖುಷಿಯಲ್ಲಿ ಇದ್ರು. ಆದ್ರೆ ಪಿಚ್ಚರ್ ಉಲ್ಟಾ ಆಯ್ತು. ಬಿಎಸ್‌ವೈ ಹಿರೋ ಆಗೋ ಮೊದ್ಲೇ ಎಚ್ಡಿಕೆ ಪಿಚ್ಚರ್ ಬಿಟ್ಟು ವಿಲನ್ ಮಾಡಿ ಬಿಟ್ರು. ಬಿಎಸ್‌ವೈ ದುಡ್ಡು ಕೊಟ್ಟು ಶಾಸಕರನ್ನಾ ಖರೀದಿ ಮಾಡ್ತಾ ಇದಾರೆ ಅಂತಾ ಹೇಳಿದ್ರು. ಅಲ್ಲಿ ಬಿಎಸ್‌ವೈ ಅಪ್ಪನಾಣೆ ಅದು ನನ್ನ ಮಾತಲ್ಲಾ, ಪ್ರೊಡ್ಯುಸರ್ ಎಚ್ಡಿಕೆ ಕಿತಾಪತಿ, ಹಂಗೆನಾದ್ರೂ ನಂದೇ ಧ್ವನಿ ಅಂತಾ ಸಾಬೀತಾದ್ರೆ ರಾಜಕೀಯ ನಿವೃತ್ತಿ ತಗೋತಿನಿ ಅಂದ್ರು. ಪಾಪಾ ಯಾವದಕ್ಕೂ ಯಡಿಯೂರು ಹಿಂಗೆಲ್ಲಾ ಸಿಕ್ಕಾಕ್ಕೋ ಬಾರ್ದಿತ್ತು ಅಂತಾ ಜನ ಆಡ್ತಿದಾರೆ.

## ಗುಂಡಿನ ವಿಷ್ಯ ತುಟ್ಟಿಲೇ ಶಿಷ್ಯಾ

ಸಿಎಂ ಕುಮಾರಸ್ವಾಮಿ ಬಜೆಟ್‌ನಲ್ಲಿ ರೈತರಿಗೆ ಕಾಸು, ಅಂಗನವಾಡಿ ಕಾರ್ಯಕರ್ತೆಯವರಿಗೆ ಗೌರವ ಧನ ಅಂತಾ ಕೊಟ್ಟು ಗೌರವಾದರ ತೋರಿಸ್ತಾ ಇದಾರೆ. ಆದ್ರೆ ನಮ್ಮ ವಿಷ್ಯದಲ್ಲಿ ಯಾಕೋ ರಾಂಗ್ ಆಗವ್ರೆ. ಹಿಂಗೇ ಆದ್ರೆ ನಮ್ತರಾನೇ ಸರಕಾರ ಬೀಳಿಸ್ಬೇಕಾಗುತ್ತೆ ಅಂತಾ ಗುಂಡಿನ ಗ್ಯಾಂಗ್‌ಸ್ಟಾರ್‌ಗಳು ಭಲೇ ರೊಚ್ಚಿಗೆದ್ದು ಆವಾಜ್ ಹಾಕ್ತಿದಾರೆ.



ನಾವೇನು ಪಾಪಾ ಮಾಡಿದ್ದೇವೆ? ನಮ್ಮ ಹಣದಲ್ಲೇ ಸರಕಾರ ನಡೆತಾ ಇರೋದು. ಹಿಂಗಾಗಿ ನಮಗೆ ಡಿಸ್ಕೊಂಟು ಕೊಡಬೇಕು. ಅದನ್ನಾ ಬಿಟ್ಟು ಬಿಯರ್ ಬೆಲೆ ಹೆಚ್ಚಿಗೆ ಮಾಡಿದ್ದು ಯಾವ ನ್ಯಾಯಾ? ಕುಮಾರಸ್ವಾಮಿ ಸರಕಾರ ಸರಕಾರಾ ನಿಂತಿರೋದೇ ನಮ್ಮ ಮ್ಯಾಗೆ, ಕೂಡ್ಲೇ ಹೆಂಡದ ಬೆಲೆ ಕಮ್ಮಿ ಮಾಡ್ಬೇಕ. ಇಲ್ದೇ ಹೋದ್ರೆ ನಾವೆಲ್ಲಾ ಒಟ್ಟಾಗಿ ಹೆಂಡದ ಅಂಗಡಿ ಮುಂದೆ ನೈಂಟಿ ಹಾಕ್ಕೊಂಡು ಹೋರಾಟಾ ಮಾಡ್ಬೇಕಾಗುತ್ತೆ. ಸರಕಾರ ನಮ್ತರಾನೇ ಬಿದ್ಹೋಗ್ತದೆ ನೋಡ್ತಾ ಇರ್ರಿ ಅಂತಾ ಹೆಂಡಾಕ್ರೋಶ ವ್ಯಕ್ತಪಡಿಸ್ತಾ ಇದಾರೆ.

## ದಾರಿ ಕಾಣದಾಗಿದೆ...

ಮುಂಬೈನಲ್ಲಿ ಕುಂತು ಸರಕಾರಾನಾ ಬುಗರಿ ತರಾ ಆಡ್ಸಿ ಬೀಳ್ಸೇ ಬಿಡ್ತೇವೆ ಅಂತಾ ಹೋಗಿ ದಾರಿ ಕಾಣದಾಗಿದೆ ರಾಘವೇಂದ್ರನೇ... ಎಂದು ಕಾಂಗ್ರೆಸ್‌ನ ನಾಲ್ವರು ಶಾಸಕರು ಭಜನೆ ಮಾಡೋ ಹಾಗೆ ಆಗಿದೆ. ರಮೇಶ ಜಾರಕಿಹೊಳಿ ಹೇಳಿ ಕೇಳಿ ಸಾವಕಾರ, ಬಂದ್ರೆ ಇವರಿಂದನೂ ಒಂದಿಷ್ಟು ಬಿಜೆಪಿಯಿಂದಾ ಮತ್ತೊಂದಿಷ್ಟು ಅಂತಾ ನಂಬಿಕೊಂಡು ನಾಗೇಂದ್ರ, ಕುಮಟಳ್ಳಿ, ಜಾಧವ ಮುಂಬೈ ಬಸ್ ಹತ್ತಿ ಕ್ಷೇತ್ರದ ಮಂದಿಗೆ ಟಾಟಾ ಮಾಡಿದ್ರು. ಆದ್ರೆ ಮುಂಬೈನಲ್ಲಿ ಎಷ್ಟು ದಿನಾ ಅಂತಾ ಇರೋದಕ್ಕೆ ಆಗುತ್ತೆ. ಇತ್ತ ಬಿಜೆಪಿಯವರ ಆಪರೇಷನ್ನೂ ಸಕ್ಸ್‌ಸ್ ಆಗ್ತಿಲ್ಲಾ, ಪಕ್ಷದವ್ರು ಗುಮ್ಮೋದನ್ನೂ ನಿಲ್ಲಿಸ್ತಾ ಇಲ್ಲಾ. ಏನಪ್ಪಾ ಮಾಡೋದು ಅಂತಾ ಕೈ ಬಿಟ್ಟು ಹೋದ ಶಾಸಕರು ಇಂಗು ತಿಂದ ಮಂಗನಂತೆ ಆಗಿದ್ದಾರೆ. ಇಲ್ಲಿ ಬಿಎಸ್‌ವೈ ಮಾತ್ರ ಇಂದಲ್ಲಾ ನಾಳೆ ಆಪರೇಷನ್ ಸಕ್ಸ್‌ಸ್ ಆಗೇ ಆಗ್ತದೆ ಅಂತಾ ದಿನಾ ದೂಡ್ತಾ ಇದಾರೆ. ಹಿಂಗೇ ಬಿಜೆಪಿಯನ್ನಾ ನಂಬಿಕೊಂಡು ಕುಂತ್ರೆ ತೊಗೋಳೋದು ಇರಲಿ, ಕೊಡೋ ಪ್ರಸಂಗಾ ಬಂದೀತು ಅಂಥಾ ನಾಗೇಂದ್ರಾ ಆ್ಯಂಡ್ ಕಂಪನಿ ಗಂಟೂ ಮೂಟೆ ಕಟ್ಟೋಕೆ ಶುರು ಮಾಡಿದ್ದಾರಂತೆ.

## ಭಟ್ಟರ್ ಸ್ನ್ಯಾಕ್

- **ಹೇಮಂತ ಗೌಡ,** ಕೆ.ಎಂ.ದೊಡ್ಡಿ
ನಿಖಿಲ್ ಕುಮಾರಸ್ವಾಮಿ ಸಿನಿಮಾ ಬಗ್ಗೆ ನಿಮ್ಮ ಅಭಿಪ್ರಾಯ?
**- ಸಿನಿಮಾ ನಟನಾಗಲು ಬಹಳ ಹೆಣಗಿದಂತಿದೆ!**

- **ಸುನಿಲ್ ಹೆಗ್ಗರವಳ್ಳಿ,** ಬೆಂಗಳೂರು
ಪತ್ರಕರ್ತ ಸ್ವಾಮಿಗೌಡ ಯಾರನ್ನಾದರೂ ಭೇಟಿ ಮಾಡಲು ಬರ್ತಾನೆ ಅಂದ್ರೆ ಏನರ್ಥ?
**- ಕನಿಷ್ಠ ಎರಡು ಸಾವಿರ ರುಪಾಯಿಗಾದರೂ ಗುನ್ನ ಬಿತ್ತು ಅಂತ ಅರ್ಥ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ವಿಶ್ವನಾಥ ತಮಾಷೆ ಮಾಡ್ತಿದ್ರಪ್ಪಾ!**

- **ಬೀರೂರು ಈಶ್ವರ,** ತುಮಕೂರು
ಸ್ತ್ರೀ ಸಂವೇದನೆ ಅಂದ್ರೆ ಏನು?
**- ಈ ಪ್ರಶ್ನೆಯನ್ನು ಬಾಡಿಗೆ ಹೋರಾಟಗಾರ್ತಿ ಕೆ. ನೀಳಾಗೆ ಕೇಳಿದರೆ ನಾಚ್ಕೋತಾಳೆ!**

- **ಸುಮೇರು ರಮೇಶ ಪಾಳ್ಯ,** ಭದ್ರಾವತಿ
ಅಗ್ನಿ ಶ್ರೀಧರ್ ವೀರಾವೇಶವೆಲ್ಲಾ ಕೆಮರಾ ಮುಂದೆ ಮಾತ್ರವಾ?
**- ಪಿಂಚಣಿ ಪ್ರಗತಿಪರರ ಬಗ್ಗೆ ಲಘುವಾಗಿ ಮಾತಾಡಬಾರದು, ಮರಿ!**

- **ಎಂ.ಸಿ.ಬಿ. ಶಾಸ್ತ್ರಿ,** ಮೇಲುಕೋಟೆ
ಮಮತಾ ಬ್ಯಾನರ್ಜಿ ಆಕ್ರೋಶದ ಮೂಲವೇನು?
**- ತೃಣಮೂಲ!**

- **ರಾಘವೇಂದ್ರ ಹಿರೇಮಠ,** ಬ್ಯಾಡಗಿ
ಹುಬ್ಬಳ್ಳಿ ನೀರಿನಲ್ಲಿ ಎಷ್ಟೇ ಉಜ್ಜಿದರೂ ನೊರೆ ಬರುವುದಿಲ್ಲವಲ್ಲ?
**- ಬ್ಯಾಡಗಿ ಮೆಣಸಿನಕಾಯಿಯನ್ನು ಎಷ್ಟೇ ನುರಿದರೂ ಖಾರಾ ಬರೊಲ್ಲವಲ್ಲ!**

- **ಹನುಮಂತಪ್ಪ ಬಿರಾದಾರ್,** ಯಾದಗಿರಿ
ನಾನೇ ಸುಂದರಿ ಅಂತ ಇಲ್ಲೊಬ್ಬಳು ಬೀಗುತ್ತಾಳಲ್ಲ?
**- ನಿನ್ನ ಆಧಾರ್ ಕಾರ್ಡ್ ನೋಡ್ಕೋ ಒಂದ್ಸಲ ಅಂತ ಹೇಳಿ!**

- **ರಾಮದಾಸ ಕ್ಯಾತನಹಳ್ಳಿ,** ಮಂಡ್ಯ
ಎಷ್ಟೇ ಹೆಂಗಸರೂ ಕೈ ಕೊಟ್ರೂ ಕೆಲವರು ತಲೆಕೆಡಿಸಿಕೊಳ್ಳುವುದಿಲ್ಲವಲ್ಲ?
**- ಹೂಂ ಕಣಪ್ಪ, ಅಂಥವರಿಗೆ 'ಬಳೆಗಾರ' ಅಂತಾರೆ!**

- **ರವಿಕಾಂತ ಹೊನ್ನೇಸರ,** ಶಿವಮೊಗ್ಗ
ಪ್ರೇಮಿಗಳ ದಿನದಂದು ಲವರ್ ಸಿಗದಿದ್ದರೆ ಏನು ಮಾಡಲಿ, ಭಟ್ರೇ?
**- ಬೇಸರ ಮಾಡ್ಕೋಬೇಡಿ ಗಾಂಧಿ ಜಯಂತಿಯಂದು ಗಾಂಧೀಜಿನೂ ಸಿಗೋದಿಲ್ಲವಲ್ಲ?!**

- **ರಂಗಸ್ವಾಮಿ ನಾಯಕ,** ಚಿತ್ರದುರ್ಗ
ಈಗ ಯಾರೂ ಮಿಸ್ಡ್ ಕಾಲ್ ಕೊಡುವುದಿಲ್ಲವಲ್ಲ?
**- ಅದು ಹಳೆ ವರಸೆ, ಈಗ ಮೆಸೇಜ್ ಕಳಿಸಿ ಡಿಲೀಟ್ ಮಾಡ್ತಾರೆ!**